12

# ದುಷ್ಟರ ದಂಡನೆ

*"ನೀನು ನಿನ್ನ ಮೊಂಡತನವನ್ನೂ ಪಶ್ಚಾತ್ತಾಪವಿಲ್ಲದ ಮನಸ್ಸನ್ನೂ ಅನುಸರಿಸುವದರಿಂದ ನಿನಗೋಸ್ಕರ ದೇವರ ಕೋಪವನ್ನು ಕೂಡಿಟ್ಟು ಕೊಳ್ಳುತ್ತಾ ಇದ್ದೀ. ದೇವರ ಕೋಪವೂ ನ್ಯಾಯವಾದ ತೀರ್ಪೂ ಪ್ರಕಟವಾಗುವ ದಿವಸ ಬರುತ್ತದಷ್ಟೆ. ಆತನು ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಕೊಡುವನು. ಯಾರು ಪ್ರಭಾವಮಾನ ನಿರ್ಲಯತ್ವಗಳನ್ನು ಹೊಂದಬೇಕೆಂದು ಒಳ್ಳೇದನ್ನು ಬೇಸರಗೊಳ್ಳದೆ ಮಾಡುತ್ತಾರೋ ಅವರಿಗೆ ನಿತ್ಯಜೀವವನ್ನು ಕೊಡುವನು. ಯಾರು ಸ್ವೇಚ್ಛೆಯುಳ್ಳವರಾಗಿ ಸತ್ಯವನ್ನು ಅನುಸರಿಸದೆ ಅನ್ಯಾಯವನ್ನು ಅನುಸರಿಸುತ್ತಾರೋ ಅವರಿಗೆ ಕೋಪ ರೌದ್ರಗಳು ಬರುವವು. ಕೆಟ್ಟದ್ದನ್ನು ನಡಿಸುವ ಪ್ರತಿಯೊಬ್ಬ ನರಪ್ರಾಣಿಗೆ ಕಷ್ಟವೂ ಸಂಕಟವೂ ಬರುವವು ..." (ರೋಮಾಪುರ 2:5-9).*

ಜೀವನದಲ್ಲಿಯ ವಿನೋದಗಳು ಎಂದೂ ತೀರಬಾರದೆಂದು ನಾವು ಬಯಸುವಾಗ, ನೋವು ಬೇಗನೇ ದಾಟಿಹೋಗಬೇಕೆಂದು ನಾವು ಬಯಸುತ್ತೇವೆ. ಉಲ್ಲಾಸಕರವಾದದ್ದು ಮತ್ತು ಅನುಭವಿಸಬೇಕಾದದ್ದು ಶಿಕ್ಷೆಯಾಗಿರುವದಿಲ್ಲ. ತಪ್ಪಾದದ್ದನ್ನು ಮಾಡಿದ್ದಕ್ಕಾಗಿ ಪ್ರತೀಕಾರವನ್ನು ನಮಗೆ ಒಪ್ಪಿಗೆ ಯಾಗಬಾರದ ಸಂಗತಿಗಳನ್ನು ನಾವು ಸಹಿಸಿಕೊಳ್ಳುವಂತೆ ಮಾಡುವದರಿಂದ ಸಾಧಿಸಲ್ಪಡಬಹುದು. ದೇವರು ತಾನು ಏನು ಮಾಡುವನು ಎಂದು ಹೇಳುವುದು ನೋವನ್ನುಂಟು ಮಾಡುವುದೆಂದು ತೋರಿದರೆ, ಅಂಥದ್ದು ನಿರೀಕ್ಷಿಸಲ್ಪಡತಕ್ಕದ್ದು. ದೇವರು ಪಾಪಿ ಮನುಷ್ಯನನ್ನು ಬೇರೆ ಹೇಗೆ ದಂಡಿಸಬಹುದು?

## ಶಿಕ್ಷೆಯು ಯಾವುದರಂತಿರುವುದು?

ನಾವು ಆಗಲೇ ತೀರ್ಮಾನಿಸಿದಂತೆ, ದುಷ್ಟರ ಶಿಕ್ಷೆಯು ಸಮಯದ ಅಂತ್ಯದಲ್ಲಿ ಎಂದೆಂದಿಗೂ ಇರುವುದೆಂದು ಬೈಬಲ್ ಬೋಧಿಸುತ್ತದೆ. "ನಿತ್ಯವಾದ ದಂಡನೆಯು" ಯಾವುದರಂತಿರುವುದು ಎಂಬುದನ್ನು ನಾವು ಊಹಿಸಲಾರೆವು (ಮತ್ತಾಯ 25:46).

### ನಿರ್ನಾಮವಾಗುವಿಕೆ

ಸದಾಕಾಲಕ್ಕೂ ಯಾರೂ ಶಿಕ್ಷಿಸಲ್ಪಡುವದಿಲ್ಲವೆಂದು ಕೆಲವರು ಬೋಧಿಸುತ್ತಾರೆ. "ನಿತ್ಯವಾದ ದಂಡನೆ" ಎಂದರೆ ಅವಿಧೇಯರು ನಿರ್ನಾಮವಾಗಿ ಹೋಗುವರು ಎಂದರ್ಥವಾಗುವದೆಂದು ಅವರು ನಂಬುತ್ತಾರೆ. ಅಸ್ತಿತ್ವದಿಂದ ಹೊರಗೆ ಹೋಗುವುದು ನಿತ್ಯವಾದ ಶಿಕ್ಷೆ ಎಂದು ಅವರು ನಂಬುತ್ತಾರೆ. ದುಷ್ಟರು ನಾಶಗೊಳಿಸಲ್ಪಡುವರು ಇಲ್ಲವೇ ನಿತ್ಯನಾಶನವನ್ನು ಹೊಂದುವರು ಎಂಬ ವಚನಗಳ ಮೇಲೆ ಈ ಬೋದನೆಯು ಅವಲಂಭಿಸಿದೆ (ಮತ್ತಾಯ 10:28).

ಮತ್ತಾಯ 10:28ರಲ್ಲಿ "ನಾಶಪಡಿಸು" ಎಂದು ಭಾಷಾಂತರಿಸಲ್ಪಟ್ಟ *apollumi*,

ಎಂಬ ಗ್ರೀಕ ಪದವು "ಸಾಯುತ್ತೇವೆ" (ಮತ್ತಾಯ 8:25) ಮತ್ತು "ಕಳೆದು ಹೋದದ್ದು" (ಲೂಕ 15:4, 6) ಎಂದೂ ಭಾಷಾಂತರಿಸಲ್ಪಟ್ಟಿದೆ. ಮತ್ತಾಯ 9:17ರಲ್ಲಿ ಯೇಸು ಹೇಳಿದ ದ್ರಾಕ್ಷರಸದ ಬುದ್ದಲಿಗಳು ಕೆಟ್ಟು ಹೋಗುವವು, ಆದರೆ ಇಲ್ಲವಾಗಿ ಹೋಗುವದಿಲ್ಲ; ಮತ್ತು ಕುರಿ, ನಾಣ್ಯ ಮತ್ತು ಮಗ ತಪ್ಪಿಹೋದವುಗಳು ಕಳೆದು ಹೋದವುಗಳು *(apollumi)* ಕಂಡುಕೊಳ್ಳಲ್ಪಟ್ಟವು (ಲೂಕ 15:6, 9, 24). ಯೇಸುವು, "ಕೆಟ್ಟು ಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು" (ಲೂಕ 19:10), ಮತ್ತು "ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು" ಎಂದು ಆತನು ವಾಗ್ದನ ಮಾಡಿದ್ದಾನೆ (ಮತ್ತಾಯ 10:39). ನಿರ್ಮೂಲವಾಗಿ ಹೋದದ್ದು ಕಂಡುಕೊಳ್ಳಲ್ಪಡುವದಿಲ್ಲ ಇಲ್ಲವೇ ರಕ್ಷಿಸಲ್ಪಡುವದಿಲ್ಲ. ಪ್ರತಿಯೊಂದು ಮುಕ್ತಾಯದ ಸಂದರ್ಭದಲ್ಲಿ, *apollumi* ಎಂಬ ಪದದ ಅರ್ಥ "ಕಳೆದು ಹೋಗುವುದು," "ಕೆಟ್ಟುಹೋಗುವುದು," "ನಾಶವಾಗುವುದು," ಇಲ್ಲವೇ "ಹಾಳಾಗುವುದು" ಎಂದಾಗುವುದು, ಆದರೆ "ನಿರ್ಮೂಲವಾಗಿ ಹೋಗುವುದು" ಎಂದರ್ಥವಾಗಲಾರದು.

ದುಷ್ಟನು ಅಂತ್ಯವಿಲ್ಲದೆ, ನಿತ್ಯತ್ವದಲ್ಲೆಲ್ಲಾ ಶಿಕ್ಷಿಸಲ್ಪಡುವದರಲ್ಲಿ ಮುಂದರಿಯುವನು: "ಅಂಥವರ ಯಾತನೆಯು ಹೊಗೆಯು ಯುಗಯುಗಾಂತರಗಳಲ್ಲಿಯೂ ಏರುತ್ತಾ ಹೋಗುತ್ತದೆ. ... ಹಗಲಿರುಳು ಉಪಶಮನವಿಲ್ಲದೆ ಯಾತನೆ ಪಡುವರು" (ಪ್ರಕಟನೆ 14:11). ಪ್ರಕಟನೆ 19:20ರಲ್ಲಿ, ಮೊದಲು ಬೆಂಕಿಯ ಕೊಳ್ಳದಲ್ಲಿ ಎಸೆಯಲ್ಪಟ್ಟ; ಸೈತಾನ, ಮೃಗ ಮತ್ತು ಸುಳ್ಳು ಪ್ರವಾದಿಯ ಶಿಕ್ಷೆಯನ್ನು ಕುರಿತು ಪ್ರಕಟನೆ 20:10ರಲ್ಲಿ ವಿವರಣೆಯು ಕೊಡಲ್ಪಟ್ಟಿದೆ. ತನ್ನಲ್ಲಿ ಎಸೆಯಲ್ಪಟ್ಟವರನ್ನು ಬೆಂಕಿಯ ಕೆರೆಯು ನಿರ್ನಾಮ ಮಾಡುವದಾಗಿದ್ದರೆ, ಈ ಮೊದಲು ಬೆಂಕಿಯ ಕೆರೆಯೊಳಗೆ ಎಸೆಯಲ್ಪಟ್ಟ ಮೃಗವೂ ಸುಳ್ಳು ಪ್ರವಾದಿಯೂ ಸಾವಿರ ವರ್ಷಗಳ ನಂತರ ಪಿಶಾಚನು ಎಸೆಯಲ್ಪಡುವ ಸಮಯದೊಳಗಾಗಿ ಸುಟ್ಟು ಹೋಗಿರಬೇಕಾಗಿತ್ತು (ಪ್ರಕಟನೆ 20:2, 3). ಅವರು ಇನ್ನೂ ಬೆಂಕಿಯ ಕೊಳ್ಳದಲ್ಲಿದ್ದರು ಮತ್ತು "ಹಗಲೂ ಇರುಳೂ ಎಂದೆಂದಿಗೂ ಎಂದೆಂದಿಗೂ" ಯಾತನೆ ಹೊಂದುವದರಲ್ಲಿ ಮುಂದುರಿಯುವರು (ಪ್ರಕಟನೆ 20:10).

ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ದೇವರ ಕೃಪೆಯನ್ನು ತಿರಸ್ಕರಿಸುವವರು ಮೋಶೆಯ ಧರ್ಮಶಾಸ್ತ್ರವನ್ನು ಮೀರಿದ ಇಸ್ರಾಯೇಲ್ಯರಿಗೆ ಕೊಡಲ್ಪಟ್ಟ ಶಿಕ್ಷೆಗಿಂತ ಹೆಚ್ಚು ಕಠಿಣವಾದ ಶಿಕ್ಷೆಗೆ ಅರ್ಹರಾಗುವರು (ಇಬ್ರಿಯ 10:29). ಮರಣವು ಅತ್ಯಂತ ಕೆಟ್ಟದ್ದಾದ ಶಿಕ್ಷೆಯಾಗಿ ಮೋಶೆಯ ಧರ್ಮಶಾಸ್ತ್ರವನ್ನು ಮೀರಿದವರಿಗೆ ಕೊಡಲ್ಪಟ್ಟದ್ದರಿಂದ, ಮರಣಕ್ಕಿಂತ ಇನ್ನೂ ಹೆಚ್ಚಾದ ಭಯಾನಕವಾದ ದಂಡನೆಯು ಇರತಕ್ಕದ್ದು. ಆ ದಂಡನೆಯು ನರಕವಾಗಿದೆ.

**ನಿಜವಾದ ಶಿಕ್ಷೆ?**

ನರಕ (ಗ್ರೀಕ: *ಗೆಹೆನ್ನಾ*)[1] ಎಂಬುದು ಯಾಕೋಬ 3:6ರ ಇತರ ಒಂದು ಉಲ್ಲೇಖವನ್ನು ಬಿಟ್ಟು ಯೇಸುವಿನಿಂದ[2] ಮಾತ್ರವೇ ಹೇಳಲ್ಪಟ್ಟ ನಿಜವಾದ ಸ್ಥಳವಾಗಿದೆ. KJVಯು *hades* ಮತ್ತು *gehenna* ಎರಡನ್ನೂ "hell" ಎಂದು ಭಾಷಾಂತರಿಸುವದರಿಂದ ವಿಷಯಗಳನ್ನು ಗಲಿಬಿಲಿ ಗೊಳಿಸಿದೆ. ಸತ್ತವರಿಗೆ ಮಧ್ಯಮ ಸ್ಥಳವಾಗಿರುವ hades ಮತ್ತು ದುಷ್ಟರು ದಂಡಿಸಲ್ಪಡುವ ಸ್ಥಳವಾಗಿರು hell ಇವುಗಳ ಮಧ್ಯದಲ್ಲಿ ಸ್ಪಷ್ಟವಾದ ಭಿನ್ನತೆಯು ಗಮನಿಸಲ್ಪಡತಕ್ಕದ್ದು.

ಗೆಹೆನ್ನಾ ಎಂಬ ಪದವು ಮೊದಲು ಯೆರೂಸಲೇಮಿನ ದಕ್ಷಣ ದಿಕ್ಕಿನಲ್ಲಿದ್ದ

ಕಸಕೊಳ್ಳಕ್ಕೆ ಅನ್ವಯಿಸಲ್ಪಟ್ಟಿತ್ತು. ಅದು ಹಿನ್ನೊಮನ ಮಕ್ಕಳಿಗೆ ಒಳಪಟ್ಟಿತ್ತು. ವಿಗ್ರಹಾರಾಧಕರು ತಮ್ಮ ಮಕ್ಕಳನ್ನು ಬಲಿಯಾಗಿ ಅಲ್ಲಿ ಸುಡುತ್ತಿದ್ದುದರಿಂದ ಅದು ದೇವರಿಗೂ ಮನುಷ್ಯನಿಗೂ ಅಸಹ್ಯವಾದ, ಶಾಪಗ್ರಸ್ತ ಸ್ಥಳವಾಯಿತು.[3] ಹೀಗೆ, ಯೇಸುವಿನ ದಿನದಲ್ಲಿ, ಅದು ಯೆರೂಸಲೇಮಿನ ಕೊಳೆಕಸಗಳನ್ನೆಲ್ಲಾ ಎಸೆಯುವ ಸ್ಥಳವಾಗಿತ್ತು. ಹೊಲಸು ವಾಸನೆಯಿಂದ ತುಂಬಿತ್ತು, ಹುಳಗಳಿಂದ ತುಂಬಿತ್ತು, ಸತತ ಬೆಂಕಿಯಿಂದ ಹೊಗೆ ಹಾಯುತ್ತಿತ್ತು. ದುಷ್ಟರ ದಂಡನೆಯ ಸ್ಥಳವಾಗಿ ಯೋಗ್ಯ ವಿವರಣೆಯಂತೆ ಯೇಸುವಿನಿಂದ ಗೆಹೆನ್ನಾ ಎಂಬ ಪದವು ಉಪಯೋಗಿಸಲ್ಪಟ್ಟಿತು.

ಗೆಹೆನ್ನಾದ ಬೆಂಕಿಯನ್ನು ಯೇಸುವು ಬೆಂಕೀ ಕೊಲಿಮೆಯಂತೆ ಹೋಲಿಸಿದನು (ಮತ್ತಾಯ 13:42, 50). ಈ ಬೆಂಕಿಯು ನಿತ್ಯವಾದದ್ದು ಮತ್ತು ಆರಿಸಲ್ಪಡದಂಥದ್ದಾಗಿದೆ (ಮತ್ತಾಯ 3:12; 18:8; 25:41; ಮಾರ್ಕ 9:48[4]). ಅಲ್ಲಿಯ "ಹುಳ" ಸಾಯುವದಿಲ್ಲ ಎಂದೂ ಆತನು ಹೇಳಿದನು. ಬೆಂಕಿ ಮತ್ತು ಹುಳಗಳು ಸತ್ತವುಗಳನ್ನು ತಿಂದು ಬಿಟ್ಟರೆ, ತಿನ್ನಲಿಕ್ಕೆ ಏನೂ ಉಳಿಯದೇ ಬೆಂಕಿ ಆರಿ ಹೋಗುವುದು ಮತ್ತು ಹುಳಗಳು ಸತ್ತು ಹೋಗುವವು ಬೆಂಕಿ ಮತ್ತು ಹುಳಗಳನ್ನು ಅಕ್ಷರಶಃವಾಗಿ ಯೋಚಿಸಬೇಕೆಂಬುದು ಯೇಸುವಿನ ಉದ್ದೇಶವಾಗಿರದಿದ್ದರೂ, ಶಿಕ್ಷೆಯ ಅಂತ್ಯವಿಲ್ಲದ ಸ್ವರೂಪವನ್ನು ಸೂಚಿಸಲು ಆತನು ಈ ಮಾತುಗಳನ್ನು ಉಪಯೋಗಿಸಿದನು.

ಬೆಂಕಿಯು ಅಕ್ಷರಾಶಃವಾಗಿರದಿದ್ದರೆ, "ಬೆಂಕಿ" ಎಂಬ ಪದವನ್ನು ಯೇಸುವು ಯಾಕೆ ಪುನಃ ಉಪಯೋಗಿಸಿದನು? ಇನ್ನೊಂದೆಡೆಯಲ್ಲಿ ಶಾರೀರಿಕ ಮಾತುಗಳನ್ನು ಬಿಟ್ಟು ಆತ್ಮದ ಶಿಕ್ಷೆಯನ್ನು ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಆತನು ಹೇಗೆ ವಿವರಿಸಬಹುದು? ಬಹುಶಃ ಪರಲೋಕವು ಅದರ ಸೌಂದರ್ಯವನ್ನು ತೋರಿಸಲು ಶರೀರಿಕ ಮಾತುಗಳಲ್ಲಿ ವಿವರಿಸಿದ ರೀತಿಯಲ್ಲಿಯೇ ಮಾಡಬಹುದು. ನರಕದ ಭಯಾನಕತೆಯನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯವಾಗುವಂತೆ ಯೇಸುವು ಶರೀರಿಕ ಮಾತುಗಳನ್ನು ಉಪಯೋಗಿಸಿರಬಹುದು.

ನರಕದಲ್ಲಿ ಯಾವ ರೀತಿಯ ಶಿಕ್ಷೆಯು ಅನುಭವಿಸಲ್ಪಡುವುದು? ಅವಿಧೇಯರು ಯಾವುದನ್ನು ನಿರೀಕ್ಷಿಸಬಹುದು?

(1) ನರಕಕ್ಕೆ ಕುಳುಹಿಸಲ್ಪಡುವವರು "ಹೊರಟು ಹೋಗಿರಿ" ಎಂದು ಹೇಳಲ್ಪಡುವರು (ಮತ್ತಾಯ 7:23; ನೋಡಿರಿ 25:41; ಲೂಕ 13:27). ಅವರು ದೇವರಿಂದ ಬೇರ್ಪಡಿಸಲ್ಪಡುವರು.

(2) ನರಕದಲ್ಲಿರುವವರು ದೇವರ ಸನ್ನಿಧಿಯಿಂದ ದೂರದಲ್ಲಿ ಶಿಕ್ಷಿಸಲ್ಪಡುವರು (2 ಥೆಸಲೊನೀಕ 1:9). ಇದು ದೇವರು ನೋಡುವದಿಲ್ಲ, ಕೇಳುವದಿಲ್ಲ ಇಲ್ಲವೇ ಅವರಿಗೆ ಸಹಾಯ ಮಾಡುವದಿಲ್ಲ ಎಂಬುದನ್ನು ಸೂಚಿಸಬಹುದು.

(3) ಸೈತಾನನೂ ಅವನ ದೂತರೂ ಹಾಗೆಯೇ ಪ್ರತಿಯೊಬ್ಬ ದುಷ್ಟ ವ್ಯಕ್ತಿಯೂ ನರಕದಲ್ಲಿ ಇರುವರು (ಮತ್ತಾಯ 25:41).

(4) ನರಕವು ಬೆಂಕಿ ಮತ್ತು ಗಂಧಕಗಳಿಂದ ಯಾತನೆಯ ಸ್ಥಳವಾಗಿರುವುದು (ಪ್ರಕಟನೆ 14:10; ನೋಡಿರಿ 20:10; 21:8).

(5) ನರಕದಲ್ಲಿರುವವರು ನಾಶಪಡಿಸಲ್ಪಡುವದರಲ್ಲಿಯೇ ಮುಂದುವರಿಯುವರು (2 ಥೆಸಲೊನೀಕ 1:9).

(6) ದೇವರ ನಿತ್ಯರಾಜ್ಯವನ್ನು ಪ್ರವೇಶಿಸಲು ಅವರಿಗೆ ಅಪ್ಪಣೆ ಇರುವದಿಲ್ಲ (1 ಕೊರಿಂಥ 6:9; ಗಲಾತ್ಯ 5:21).

(7) ದೇವರ ಕೋಪದ ಶ್ರಮೆಯನ್ನು ಅವರು ಅನುಭವಿಸುತ್ತಿರುವರು (ಮತ್ತಾಯ

3:7; ನೋಡಿರಿ ರೋಮಾಪುರ 2:5; 5:9; ಎಫೆಸ 5:6; ಕೊಲೊಸ್ಸೆ 3:6). ಮಿಶ್ರಣವಿಲ್ಲದೇ ಅದು ಸುರಿಸಲ್ಪಡುವುದು (ಪ್ರಕಟನೆ 14:10).

(8) ಅವರು ಹೊರಗೆ ಕಾರ್ಗತ್ತಲೆಯಲ್ಲಿ ಇರುವರು (ಮತ್ತಾಯ 8:12; ನೋಡಿರಿ 22:13; 25:30; 2 ಪೇತ್ರ 2:17; ಯೂದ 13).

(9) ಅವರು ದಂಡನೆಗೆ ಗುರಿಯಾಗುವರು (ಮಾರ್ಕ 16:16; ಯೋಹಾನ 5:29; 2 ಥೆಸಲೊನೀಕ 2:12; 2 ಪೇತ್ರ 2:3; KJV).

(10) ಅವರು ನಾಶನದ ಸ್ಥಿತಿಯಲ್ಲಿರುವರು (ಗಲಾತ್ಯ 6:8).

(11) ಅವರು ದೇವರ ಪ್ರತೀಕಾರವನ್ನು ಸಹಿಸುವರು (ರೋಮಾಪುರ 12:19).

ಶಿಕ್ಷಿಸಲ್ಪಟ್ಟವರ ಪ್ರತಿಕ್ರಿಯೆಯು ವರ್ಣಿಸಲಾರದಂಥದ್ದಾಗಿರುತ್ತದೆ: ಅವರು ಕಷ್ಟವನ್ನೂ ಸಂಕಟವನ್ನೂ ಅನುಭವಿಸುತ್ತಿರುವರು (ರೋಮಾಪುರ 2:9). ಅವರು ಗೋಳಾಡುತ್ತಿರುವರು ಮತ್ತು ಹಲ್ಲು ಕಡಿಯುತ್ತಿರುವರು ಎಂದು ಯೇಸು ಹೇಳಿದ್ದಾರೆ, ಇದು ಅತಿಯಾದ ನೋವನ್ನು ವಿವರಿಸುತ್ತದೆ (ಮತ್ತಾಯ 8:12; 13:42, 50; 22:13; 24:51; 25:30; ಲೂಕ 13:28).

ನರಕದ ಬಗ್ಗೆ ಹೇಳಿದ್ದೆಲ್ಲವೂ ಭಯಾನಕವಾಗಿ ಕೆಟ್ಟದ್ದಾಗಿದೆ; ಯಾವ ಒಳ್ಳೆಯದೂ ಹೇಳಲ್ಪಟ್ಟಿರುವದಿಲ್ಲ. ಅಲ್ಲಿಗೆ ಹೋಗುವವರು ಜೀವಿಸಿದ ಪ್ರತಿಯೊಬ್ಬ ದುಷ್ಟ ವ್ಯಕ್ತಿಯೊಂದಿಗೆ ಹಾಗೆಯೇ ಸೈತಾನ ಮತ್ತು ಅವನ ದೂತರೊಂದಿಗೆ ಸದಾಕಾಲಕ್ಕೂ ಸಂಬಂಧಿಸಿ ಇರಬೇಕಾಗುತ್ತದೆ (ಮತ್ತಾಯ 25:41)! ಅವರೆಂದಿಗೂ ದೇವರೊಂದಿಗಾಗಲೀ ಇಲ್ಲವೇ ನೀತಿವಂತರೊಂದಿಗಾಗಲೀ ಇರುವದಿಲ್ಲ. ಅವರು ಸದಾಕಾಲಕ್ಕೂ ಕತ್ತಲೆಯಲ್ಲಿ ಇರುವರು. ದೇವರು, ಬೆಳಕಾಗಿರುವಾತನು, ಅಲ್ಲಿ ಇರುವದಿಲ್ಲ, ಸೂರ್ಯ ನಕ್ಷತ್ರ ಸಮೂಹಗಳು, ನಮ್ಮ ವಿಶ್ವದ ಪ್ರತಿಯೊಂದು ಬೆಳಕು ಅಸ್ತಿತ್ವದಲ್ಲಿರುವದಿಲ್ಲ. ದೇವರು ಮತ್ತು ಈ ಬೆಳಕುಗಳು ಇಲ್ಲದೇ ಅಲ್ಲಿ ಕತ್ತಲೆ ಮಾತ್ರವೇ ಇರುವುದು.

## ಅಲ್ಲಿ ಶಿಕ್ಷೆಯ ಶ್ರೇಣಿಗಳು ಇರುವವೋ?

ದೇವರ ಶಿಕ್ಷೆಯು ಉಗ್ರವಾದದ್ದರಿಂದ, "ಅಲ್ಲಿ ಶಿಕ್ಷೆಯ ಶ್ರೇಣಿಗಳು ಇರುವವೋ?" ಎಂದು ನಾವು ಕೇಳಬಹುದು. "ಉತ್ತಮ ಜೀವನ" ಜೀವಿಸಿದ ಆದರೆ ಸುವಾರ್ತೆಯನ್ನು ತಿರಸ್ಕರಿಸಿದವನನ್ನು ಶಿಕ್ಷಿಸುವ ಹಾಗೆಯೇ ಯಾರನ್ನಾದರೂ ಕೊಲೆಮಾಡಿದ ಅನೈತಿಕ ವ್ಯಕ್ತಿಯನ್ನು ದೇವರು ಶಿಕ್ಷಿಸುವನೋ? ನ್ಯಾಯವಂತ ದೇವರು ಇದನ್ನು ಮಾಡುವನೋ? ಮಾನವ ವಿವೇಚನೆಯು "ಇಲ್ಲ!" ಎಂದು ಹೇಳುವುದು, ಆದರೆ ಅದು ದೇವರು ಹೇಗೆ ಕಾರ್ಯಮಾಡುವನು ಎಂಬುದನ್ನು ರುಜುವಾತು ಪಡಿಸುವದಿಲ್ಲ.

ಶಿಕ್ಷೆಯ ಶ್ರೇಣಿಗಳು ಇರುವುದೆಂದು ಕೆಲವು ಪರಿಶುದ್ಧ ಬರಹಗಳು ಸೂಚಿಸುತ್ತವೆ, ಮೃಗವನ್ನು ಆರಾಧಿಸಿದವರು "ದೇವರ ಕೋಪವೆಂಬ ಪಾತ್ರೆಯಲ್ಲಿ ಏನೂ ಬೆರಸದೆ ಹಾಕಿದ ದೇವರ ರೌದ್ರವೆಂಬ ದ್ರಾಕ್ಷರಸವನ್ನು ಕುಡಿಯುವರು" (ಪ್ರಕಟನೆ 14:10) ಎಂಬ ಹೇಳಿಕೆಯು ಎಲ್ಲರೂ ದೇವರ ರೌದ್ರವೆಂಬ ಪೂರ್ಣ ಶಕ್ತಿಯ ದ್ರಾಕ್ಷಾರಸವನ್ನು ಕುಡಿಯುವದಿಲ್ಲ ಎಂಬುದನ್ನು ಸೂಚಿಸುತ್ತದೆ. ಮೃಗವನ್ನು ಆರಾಧಿಸಿದವರು ಮಾತ್ರವೇ ದೇವರ ಪರಿಪೂರ್ಣ ಕೋಪವನ್ನು ಹೊಂದಿಕೊಳ್ಳುವರು.

ಯೆಹೂದ್ಯರ ಕಪಟಿಗಳಾದ ಧಾರ್ಮಿಕ ನಾಯಕರನ್ನು ಕುರಿತು, ಅವರು "ವಿಧವೆಯರ ಮನೆಗಳನ್ನು ನುಂಗಿ ನಟನೆಗಾಗಿ ದೇವರಿಗೆ ಉದ್ದವಾದ ಪ್ರಾರ್ಥನೆಗಳನ್ನು ಮಾಡುವವರಾದ ಇವರು ಹೆಚ್ಚಾದ ದಂಡನೆಯನ್ನು ಹೊಂದುವರು" ಎಂದು ಯೇಸು

ಹೇಳಿದ್ದಾರೆ (ಮಾರ್ಕ 12:40, ನೋಡಿರಿ ಮತ್ತಾಯ 23:14; ಲೂಕ 20:47). "ಹೆಚ್ಚಾದ ದಂಡನೆ" ಎಂಬುದು ಅತೀ ಕೆಟ್ಟ ಶಿಕ್ಷೆಯೆಂದು ಅರ್ಥವಾಗದಿದ್ದರೆ, ಅದರ ಅರ್ಥವೇನಾಗುತ್ತದೆ?

ಲೂಕ 12ರಲ್ಲಿಯ ಸಾಮ್ಯದಲ್ಲಿ ಜೊತೆ ಗುಲಾಮರನ್ನು ಹೊಡೆಯುತ್ತಿದ್ದ, ಕುಡಿದು ಮತ್ತನಾಗುತ್ತಿದ್ದ ಗುಲಾಮನನ್ನು ಕಂಡುಕೊಂಡ ಯಜಮಾನನ ಬಗ್ಗೆ ಯೇಸು ಹೇಳಿದ್ದಾರೆ. ಅವಿಶ್ವಾಸಿಗಳೊಂದಿಗೆ ಈ ಗುಲಾಮನಿಗೆ ಸ್ಥಾನ ಕೊಡಲ್ಪಡಬೇಕೆಂದು ಸೂಚಿಸಿದ ನಂತರ, ಯೇಸು ಮುಂದಲಿಸಿ ಹೀಗೆ ಹೇಳಿದರು:

> ತನ್ನ ಯಜಮಾನನ ಚಿತ್ತವನ್ನು ತಿಳಿದ ಆಳು ಸಿದ್ಧ ಮಾಡದೆ ಹೋದರೆ ಅಥವಾ ಅವನ ಚಿತ್ತಕ್ಕನುಸಾರ ನಡೆಯದಿದ್ದರೆ ಅವನು ಬಹಳ ಪೆಟ್ಟು ತಿನ್ನುವನು. ತಿಳಿಯದೆ ಪೆಟ್ಟುಗಳಿಗೆ ಯೋಗ್ಯವಾದದ್ದನ್ನು ನಡಿಸಿದವನು ಸ್ವಲ್ಪ ಪೆಟ್ಟು ತಿನ್ನುವನು. ಯಾವನಿಗೆ ಬಹಳವಾಗಿ ಕೊಟ್ಟಿದೆಯೋ ಅವನ ಕಡೆಯಿಂದ ಬಹಳವಾಗಿ ನಿರೀಕ್ಷಿಸಲ್ಪಡುವುದು; ಇದಲ್ಲದೆ ಯಾವನ ವಶಕ್ಕೆ ಬಹಳವಾಗಿ ಒಪ್ಪಿಸಿದೆಯೋ ಅವನ ಕಡೆಯಿಂದ ಇನ್ನೂ ಹೆಚ್ಚಾಗಿ ಕೇಳುವರು (ವಚನಗಳು 47, 48).

ಈ ವಾಕ್ಯಭಾಗಗಳಲ್ಲಿ ಯೇಸುವು ಶಿಕ್ಷೆಯ ಶ್ರೇಣಿಗಳ ಬಗ್ಗೆ ಮಾತಾಡುತ್ತಿದ್ದನು. ಈ ಬೋಧನೆಯು ನರಕದಲ್ಲಿಯ ನಿತ್ಯವಾದ ಶಿಕ್ಷೆಗೆ ಅನ್ವಯಿಸಲ್ಪಡ ಬಹುದೋ? ಹಾಗಿದ್ದರೆ, ಶಿಕ್ಷೆಯ ಶ್ರೇಣಿಗಳು ಇರುವವೆಂದಾಗುತ್ತದೆ.

## ನರಕಕ್ಕೆ ಯಾರು ಹೋಗುವರು?

ಯಾರು ಶಿಕ್ಷಿಸಲ್ಪಡುವರು ಎಂಬುದು ನಮಗೆ ಹೇಳಲ್ಪಟ್ಟಿದೆ. ಮೊಂಡರು, ಪಶ್ಚಾತ್ತಾಪವಿಲ್ಲದ ಹೃದಯದವರು, ಸ್ವೇಚ್ಛೆಯುಳ್ಳವರು, ಸತ್ಯಕ್ಕೆ ವಿಧೇಯರಾಗದವರು, ಅನ್ಯಾಯವನ್ನು ಅನುಸರಿಸುವವರು, ಕೆಟ್ಟದ್ದನ್ನು ನಡಿಸುವವರು ಎಂದು ಪೌಲನು ಅವರನ್ನು ವಿವರಿಸಿದ್ದಾನೆ (ರೋಮಾಪುರ 2:5, 8, 9). ಅವರು, "ದೇವರನ್ನರಿಯದವರೂ, ... ಯೇಸುವಿನ ಸುವಾರ್ತೆಗೆ ಒಳಪಡದವರೂ" ಒಳಗೊಂಡಿದ್ದಾರೆ ಎಂದು ಬರೆದಿದ್ದಾನೆ (2 ಥೆಸಲೊನೀಕ 1:8). ಪರಲೋಕಕ್ಕೆ ಹೋಗದವರ ಯಾದಿಯನ್ನು ಪೌಲನು ಕೊಟ್ಟಿರುತ್ತಾನೆ, ಅವರು ನರಕಕ್ಕೆ ಹೋಗುವರು ಎಂದರ್ಥವಾಗುತ್ತದೆ (1 ಕೊರಿಂಥ 6:9; ನೋಡಿರಿ ಗಲಾತ್ಯ 5:21; ಎಫೆಸ 5:5). ಅವರು ಜೀವಿಸಿದ ಜೀವಿತಗಳ ಕಾರಣದಿಂದ, ನರಕವು ಅವರ ನಿತ್ಯ ವಾಸಸ್ಥಳವಾ ಗಿರುವುದು.

ಹೊಸ ಒಡಂಬಡಿಕೆಯು ಭಯದ ಬಗ್ಗೆ ಮಾತಾಡುತ್ತಿರುವುದು ಆಶ್ಚರ್ಯವಾಗಿರುವದಿಲ್ಲ. "ಕರ್ತನ ಭಯವು ನಮಗಿರುವದರಿಂದ ನಾವು ಮನುಷ್ಯರನ್ನು ಒಡಂಬಡಿಸುತ್ತೇವೆ" (2 ಕೊರಿಂಥ 5:11) ಎಂದು ಪೌಲನು ಬರೆದಿದ್ದಾನೆ. ಹಾಗೆಯೇ ಪೇತ್ರನು, "ಪ್ರತಿಯೊಬ್ಬನ ಕೆಲಸವನ್ನು ನೋಡಿ ಪಕ್ಷಪಾತವಿಲ್ಲದೆ ತೀರ್ಪುಮಾಡುವಾತನನ್ನು ನೀವು ತಂದೆಯೆಂದು ಕರೆಯುವವರಾಗಿರಲಾಗಿ ಈ ಲೋಕದಲ್ಲಿ ನಿಮ್ಮ ಪ್ರವಾಸಕಾಲವನ್ನು ಭಯಭಕ್ತಿಯುಳ್ಳವರಾಗಿ ಕಳೆಯಿರಿ" (1 ಪೇತ್ರ 1:17) ಎಂದು ಬರೆದಿದ್ದಾನೆ. "ದೇಹವನ್ನು ಕೊಂದು ಪ್ರಾಣವನ್ನು ಕೊಲ್ಲಲಾರದವರಿಗೆ ಭಯಪಡಬೇಡಿರಿ, ಆದರೆ ನರಕದಲ್ಲಿ ಪ್ರಾಣ ಮತ್ತು ದೇಹ ಎರಡನ್ನೂ ನಾಶಪಡಿಸಲು ಶಕ್ತನಾದಾತನಿಗೆ ಭಯ ಪಡಿರಿ" ಎಂದು ಯೇಸು ಹೇಳಿದನು. "ಹೀಗಿರುವಲ್ಲಿ ನನ್ನ ಪ್ರಿಯರೇ, ನೀವು ನನ್ನ ಮಾತನ್ನು ಯಾವಾಗಲೂ ಕೇಳಿದಂತೆ ಈಗಲೂ ಕೇಳಿರಿ. ನಾನು ನಿಮ್ಮಲ್ಲಿರುವಾಗ ಮಾತ್ರವಲ್ಲದೆ ನಾನಿಲ್ಲದಿರುವಾಗಲೂ ಬಹು

ಹೆಚ್ಚಾಗಿ ಮನೋಭೀತಿಯಿಂದ ನಡುಗುವವರಾಗಿ ನಿಮ್ಮ ನಿಮ್ಮ ರಕ್ಷಣೆಯನ್ನು ಸಾಧಿಸಿರಿ" (ಫಿಲಿಪ್ಪಿ 2:12) ಎಂದೂ ಸಹ ಪೌಲನು ಬರೆದನು.

"ಪೂರ್ಣಪ್ರೀತಿಯು[5] ಹೆದರಿಕೆಯನ್ನು ಹೊರಡಿಸಿಬಿಡುತ್ತದೆ" (1 ಯೋಹಾನ 4:18), ಮತ್ತು ಪೂರ್ಣ ಪ್ರೀತಿಯು ನಮ್ಮನ್ನು ವಿಧೇಯರನ್ನಾಗಿ ಇಡುತ್ತದೆ (ಯೋಹಾನ 14:15, 21; 1 ಯೋಹಾನ 5:3). ನಾವು ಪ್ರೀತಿ ಮತ್ತು ದೇವರ ಭಯ ಎರಡನ್ನೂ ಬೆಳೆಸಿಕೊಳ್ಳತಕ್ಕದ್ದು. ದೇವರಿಗಾಗಿ ನಮ್ಮ ಪ್ರೀತಿಯು ಆತನ ಸೇವೆ ಮಾಡಲು ಆತನ ಹತ್ತಿರಕ್ಕೆ ನಮ್ಮನ್ನು ಎಳೆಯತಕ್ಕದ್ದು, ಮತ್ತು ದೇವರ ಬಗ್ಗೆ ನಮ್ಮ ಭಯವು ಆತನ ಚಿತ್ತವನ್ನು ಮಾಡುವಂತೆ ಆತನನ್ನು ಗೌರವಿಸಲು ನಮ್ಮನ್ನು ನಡಿಸಬೇಕು (1 ಪೇತ್ರ 1:17).

## ಮುಕ್ತಾಯ

ಹೇಳಲ್ಪಟ್ಟ ಎಲ್ಲವೂ ನಾವು ನರಕಕ್ಕೆ ಹೋಗಲು ಇಷ್ಟಪಡುವದಿಲ್ಲವೆಂದು ನಾವು ದೃಢಪಡಿಸಿಕೊಳ್ಳಲು ಸಾಕಷ್ಟಾಗಿರುವುದು. ನರಕವು ನಮಗಾಗಿ ರೂಪಿಸಲ್ಪಟ್ಟಿರುವದಿಲ್ಲ, ಆದರೆ ಸೈತಾನನಿಗೂ ಅವನ ದೂತರಿಗೂ ರೂಪಿಸಲ್ಪಟ್ಟಿದೆ. ಜಗತ್ತಿನ ಚರಿತ್ರೆಯಲ್ಲೆಲ್ಲಾ ಅವನು ತೊಂದರೆಗೆ ಕಾರಣನಾದುದರಿಂದ, ಸೈತಾನನು ಸದಾಕಾಲಕ್ಕೂ ದೇವರು ರೂಪಿಸಿದ ಅತೀ ಬಿಸಿಯಾಗಿರುವ ನರಕಕ್ಕೆ ಅರ್ಹನಾಗಿದ್ದಾನೆ. ಹಾಗಿದ್ದರೂ, ನಾವು ಇದನ್ನು ಹೇಳಿದರೆ, ದೇವರಿಗೆ ವಿಧೇಯರಾಗದೆ, ಆದರೆ ಸೈತಾನನನ್ನು ಹಿಂಬಾಲಿಸುವವರು ತಮ್ಮ ಪಾಪಗಳಿಗಾಗಿ ಇನ್ನೂ ಹೆಚ್ಚು ದಂಡನೆ ಹೊಂದ ಬೇಕಾಗುವುದೆಂದು ನಾವು ತಿಳಿಯಬೇಕಾಗುತ್ತದೆ.

ನಮ್ಮ ಅತೀ ದೊಡ್ಡ ಗುರಿಯು ಪರಲೋಕವನ್ನು ತಲುಪುವುದು ಮತ್ತು ನರಕದ ಶಿಕ್ಷೆಯನ್ನು ತಪ್ಪಿಸಿಕೊಳ್ಳುವುದು ಆಗಿದೆ. ಪರಲೋಕದಲ್ಲಿ ಕೆಳಗಿನ ಸ್ಥಳಗಳಿದ್ದರೆ, ನರಕದಲ್ಲಿ ಅತೀ ಉನ್ನತ ಸ್ಥಳಗಳಿದ್ದರೆ ನಿತ್ಯತ್ವದಲ್ಲೆಲ್ಲಾ ನರಕದ ಅತ್ಯುತ್ತಮ ಸ್ಥಳದಲ್ಲಿ ಕಳೆಯುವದಕ್ಕಿಂತ ಪರಲೋಕದ ಕೆಳಗಿನ ಸ್ಥಳದಲ್ಲಿ ಕಳೆಯುವುದು ಹೆಚ್ಚು ಅಪೇಕ್ಷಣೀಯವಾಗಿದೆ. ದೇವರು ಬಯಸುವ ರೀತಿಯಲ್ಲಿ ನಾವು ಜೀವಿಸುವದರಿಂದ ಮತ್ತು ಇತರರನ್ನು ಪರಲೋಕಕ್ಕೆ ಹೋಗಲು ಸಿದ್ಧಪಡಿಸುವದರಿಂದ ನರಕದ ಭಯಾನಕತೆಗಳನ್ನು ನಾವು ತಪ್ಪಿಸಿಕೊಳ್ಳಬಹುದು.

---

ಟಿಪ್ಪಣಿಗಳು

[1]*Gehenna* is a transliteration into Greek of a Hebrew word that is the combination of two Hebrew words, *ge*, meaning "valley," and *Hinnom*, the owner of the valley. [2]ನೋಡಿರಿ ಮತ್ತಾಯ 5:22, 29, 30; 10:28; 18:9; 23:15, 33; ಮಾರ್ಕ 9:43, 45, 47; ಲೂಕ 12:5; ಯಾಕೋಬ 3:6. [3]ನೋಡಿರಿ 2 ಅರಸು 23:10; ನೋಡಿರಿ 2 ಪೂರ್ವಕಾಲವೃತ್ತಾಂತ 28:3; 33:6; ಯೆರೆಮೀಯ 7:31, 32; 19:6. [4]ನೋಡಿರಿ ಮಾರ್ಕ 9:43; ಲೂಕ 3:17. [5]"ಪೂರ್ಣ" ಎಂದು ಭಾಷಾಂತರಿಸಲ್ಪಟ್ಟ ಗ್ರೀಕ ಪದವು *telios* ಅದರ ಅರ್ಥ "ಪ್ರೌಢತೆ."

© 2009 Truth for Today